೩. ಸುವರ್ಣ ಕೌಶಲ್ಯಾಭಿವೃದ್ಧಿ ಯೋಜನೆ

ತರಬೇತಿ ಸಂಸ್ಥೆಗಳು ಸ್ಥಾಪನೆಯಾದ ನಂತರ ವಿವಿಧ ರೀತಿಯ ವಿಶಿಷ್ಟ ಕುಶಲತೆ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ತರಬೇತಿಯನ್ನು ಉತ್ತಮಪಡಿಸಿ ಅವರ ಉದ್ಯೋಗ ಅರ್ಹತೆಯನ್ನು ಹೆಚ್ಚಿಸುವುದು.

೪. ಕುಶಲಕರ್ಮಿಗಳಿಗೆ ತರಬೇತಿ

ಗುಂಪು ಚಟುವಟಿಕೆ ಆಧಾರದ ಮೇಲೆ ಕುಶಲಕರ್ಮಿಗಳಿಗೆ ಅನುಕೂಲವಾಗುವಂತೆ ಸಾಮಾನ್ಯ ಕಾರ್ಯಗಾರ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅವರ ಉತ್ಪಾದನೆ ಹೆಚ್ಚಿಸುವಲ್ಲಿ ಸಹಾಯ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೭೩ (೨೧೬೫)

ಸದಸ್ಯರ ಹೆಸರು : ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು)

ಉತ್ತರಿಸುವವರು : ಶ್ರೀ ರಾಮಚಂದ್ರ ಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಫ್ಲೇವಿನ್ ಮತ್ತು ಒಂದಂಕಿ ಲಾಟರಿಗಳಿಂದ ಬಡ, ಮಾಧ್ಯಮ, ವರ್ಗದ ಕುಟುಂಬಗಳು ಸಾಲದ ಸಂಕಷ್ಟಕ್ಕೆ ಸಿಲುಕಿ ಬೀದಿ ಪಾಲಾಗುತ್ತಿರುವುದರಿಂದ ಇದನ್ನು ರದ್ದುಗೊಳಿಸಲು ಮಹಿಳಾ ಸಂಘಟನೆಗಳೂ, ಹಿರಿಯ ಮುಖಂಡರುಗಳು ಪ್ರತಿಭಟನೆ ಮೂಲಕ ರಾಜ್ಯ ಸರ್ಕಾರದ ಗಮನಸೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಇದನ್ನು ರದ್ದುಪಡಿಸಲು ಸರ್ಕಾರವು, ಕೈಗೊಂಡಿರುವ ಕ್ರಮವೇನು?

ಉತ್ತರ

ಅ, ಆ) ಹೌದು, ಸರ್ಕಾರ ದಿ: ೧.೪.೨೦೦೭ ರಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯವನ್ನು ಲಾಟರಿ ಮುಕ್ತ ವಲಯವನ್ನಾಗಿ ಘೋಷಿಸಿದ್ದು, ಎಲ್ಲಾ ತರಹದ ಲಾಟರಿ ಮಾರಾಟವನ್ನು ದಿ: ೧.೪.೨೦೦೭ ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಲಾಗಿದೆ.